೫. ಧನ ಸಹಾಯ ಪಡೆದ ಒಟ್ಟು ಹಣದ ಮೊತ್ತ ಈ ಕೆಳಗಿನಂತಿದೆ ;

ವರ್ಷ	ಒಟ್ಟು ಸಹಾಯಧನ ಮಂಜೂರಾತಿ (ಪರಿಶಿಷ್ಟ ಜಾತಿ)	ಒಟ್ಟು ಸಾಲ ಮಂಜೂರಾತಿ (ಪರಿಶಿಷ್ಟ ಜಾತಿ)
81-82 ರೂ.	19.16 ಲಕ್ಷ ರೂ,	34.66 ಲಕ್ಷ
82-83 ,,	92.216 ಲಕ್ಷ ,,	30.70 ,,
83-84 ,: (ಜುಲೈ 83ರ ವರೆಗೆ)	15.89 ಲಕ್ಷ ,,	50.16 ,,

ಶ್ರೀ ಬಿ.ಎಚ್. ಯಂಕಾನಾಯ್ಕ.--ನಾನು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಮತ್ತು ಹಡಗಲಿ ತಾಲ್ಲೂಕು, ಕೊಡ್ಲಗಿ ತಾಲ್ಲೂಕುಗಳ ಬಗ್ಗೆ ತಾಲ್ಲೂಕ್‌ವಾರ ಅಂಕಿಅಂಶ ಕೇಳಿದ್ದೆ. ತಾವು ತಾಲ್ಲೂಕ್ ವೈಸ್ ಹೇಳುತ್ತೀರಾ ?

ಶ್ರೀ ಎಂ.ಪಿ. ಪ್ರಕಾಶ್ (ಸಾರಿಗೆ ರಾಜ್ಯ ಸಚಿವರು).--ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯಮಂತ್ರಿಗಳ ಪರವಾಗಿ ನಾನು ಉತ್ತರದಲ್ಲೇ ತಿಳಿಸಿದ್ದೇನೆ. ಸದ್ಯಕ್ಕೆ ಆ ಅಂಕಿಅಂಶ ದೊರಕದೇ ಇರುವುದರಿಂದ ಈಗ ಇರುವ ಮಾಹಿತಿಯನ್ನು ಹೇಳಿದ್ದೇನೆ. ಮಾನ್ಯ ಸದಸ್ಯರಿಗೆ ಬೇಕಾದರೆ ಅದನ್ನೂ ತರಿಸಿಕೊಡುತ್ತೇನೆ.

ಶ್ರೀ ಹೆಗ್ಗಪ್ಪ ಲಮಾಣಿ.--ಲಮಾಣಿ ಸಮಾಜದ ಬಗ್ಗೆ ತಾವು ವಿವರ ಹೇಳಿಲ್ಲಾ. ಮುಂದಾದರೂ ಕೂಡ ಇದರ ಬಗ್ಗೆ ವಿವರಗಳನ್ನು ತರಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಎಂ.ಪಿ. ಪ್ರಕಾಶ್.--ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀ ಬಿ.ಹೆಚ್. ಯಂಕಾನಾಯ್ಕ.--ಸ್ವಾಮಿ, ಲಂಬಾಣಿ ಕುಟುಂಬಗಳಿಗೆ ಮಾತ್ರ ಎಷ್ಟು ಕೊಳವೆ ಬಾವಿಗಳು, ನೀರಾವರಿ ಬಾವಿಗಳು, ಹೈನುಗಾರಿಕೆ ಮತ್ತು ರೇಷ್ಮೆಬೆಳೆಗೆ ಧನಸಹಾಯ ಮಾಡಿದ್ದಾರೆ ಎನ್ನುವ ಬಗ್ಗೆ ವಿವರಗಳನ್ನಾದರೂ ಹೇಳುತ್ತೀರಾ ?

ಶ್ರೀ ಎಂ.ಪಿ. ಪ್ರಕಾಶ್.--ಈ ಪ್ರಶ್ನೆಯಲ್ಲಿ ಅದು ಉದ್ಭವಿಸುವುದಿಲ್ಲ. ಯಾವ್ಯಾವ ಭಾಗದಲ್ಲಿ ಒಟ್ಟು ಎಷ್ಟು ಖರ್ಚಾಗಿದೆ ಅವುಗಳ ವಿವರಗಳು ಸಧ್ಯದಲ್ಲಿ ನನ್ನ ಹತ್ತಿರದಲ್ಲಿ ಇಲ್ಲ.

ವಿಷಯ :- ಬಾದಾಮಿ ತಾಲ್ಲೂಕಿನ ಹಿರೇ ಬೂದಿಹಾಳ ಗ್ರಾಮಕ್ಕೆ ಕೊಳವಾಯಿ ನೀರಿನ ಸರಬರಾಜು

ಪ್ರ. 140(79) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ).--ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯಿತ್‌ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :--

ಅ. ಬಾದಾಮಿ ತಾಲ್ಲೂಕಿನ ಹಿರೇಬೂದಿ ಹಾಳ ಗ್ರಾಮದಲ್ಲಿ ನಳದ ಮೂಲಕ ನೀರು ಸರಬರಾಜು ಯೋಜನೆಯ ಸಲುವಾಗಿ 11-8-77ರಂದು ಛೇರ್‌ಮನ್ ಗ್ರಾಮ ಪಂಚಾಯತಿಯವರಿಂದ ಲೋಕೋಪಯೋಗಿಯ ಇಲಾಖೆಯವರು ನಗದು 5000-00 ರೂಪಾಯಿ ಚಲನ್ ಮುಖಾಂತರ ತುಂಬಿಸಿಕೊಂಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ. ಹಾಗಿದ್ದಲ್ಲಿ ಆ ಗ್ರಾಮಕ್ಕೆ ನಳದ ಯೋಜನೆಯನ್ನು ಮಂಜೂರು ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಂ.ಪಿ. ಪ್ರಕಾಶ್ (ಸಾರಿಗೆ ರಾಜ್ಯಮಂತ್ರಿಗಳು).--ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತಿ ರಾಜ್ ಮಂತ್ರಿಗಳ ಪರವಾಗಿ :--

ಅ. ಬಾದಾಮಿ ತಾಲ್ಲೂಕಿನ ಹಿರೇಬೂದಿಹಾಳ ಗ್ರಾಮಕ್ಕೆ ನಳದ ನೀರು ಸರಬರಾಜು ಯೋಜನೆಗಾಗಿ ಶೇ. 10ರಷ್ಟು ಸಾರ್ವಜನಿಕ ವಂತಿಗೆಯ ರೂಪದಲ್ಲಿ ರೂ. 5000 ಗಳನ್ನು ಸರ್ಕಾರಕ್ಕೆ ಕಟ್ಟಲಾಗಿದೆ.

ಆ. ಈ ಗ್ರಾಮವು ಸವಳು ಪ್ರದೇಶದಲ್ಲಿ ಬರುತ್ತದೆ. ಆದುದರಿಂದ ಶುದ್ಧವಾದ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ಹಿರೇ ಬೂದಿಹಾಳ ಮತ್ತು ಹಂಗರಗಿ ಗ್ರಾಮಗಳ ಒಂದು ಪ್ರಾದೇಶಿಕ ಕುಡಿಯುವ ನೀರಿನ ಯೋಜನೆಯನ್ನು ರೂ.3.75 ಲಕ್ಷ ರೂಪಾಯಿಗಳ ಅಂದಾಜು ವೆಚ್ಚವನ್ನು ತಯಾರಿಸಲಾಗಿದೆ. ನೀರು ಸಂಗ್ರಹಗಾರ (ಅಂದರೆ 20 ಸಾವಿರ ಗ್ಯಾಲನ್ ಸಾಮರ್ಥ್ಯ ಉಳ್ಳದ್ದು) ಸ್ಥಾಪಿಸಲಾಗುವುದು. ಈ ಯೋಜನೆ ಪರಿಶೀಲನೆಯಲ್ಲಿದೆ.

ಶ್ರೀ ಮಲ್ಲಿಕಾರ್ಜುನ ಬಿ. ಬನ್ನಿ.—ಸ್ವಾಮಿ, ಬಾದಾಮಿ ತಾಲ್ಲೂಕಿನ ಹಿರೇಬೂದಿಹಾಳ ಗ್ರಾಮದ ನೀರು ಸರಬರಾಜು ಯೋಜನೆಗಾಗಿ ಶೇ. 10ರಷ್ಟು ಸಾರ್ವಜನಿಕ ವಂತಿಗೆಯ ರೂಪದಲ್ಲಿ 5 ಸಾವಿರ ರೂಪಾಯಿಗಳನ್ನು ಕಟ್ಟಲಾಗಿದೆ ಎಂದು ಹೇಳಿದ್ದೀರಿ. ತಾ॥ 11-8-77ರಂದು ಈ ಹಣವನ್ನು ತುಂಬಿಸಿಕೊಂಡಿದ್ದರೂ ಕೂಡ ಇದುವರೆಗೂ ಆ ಯೋಜನೆಯನ್ನು ತೆಗೆದುಕೊಂಡಿಲ್ಲಾ. ಆದುದರಿಂದ ಈ ಯೋಜನೆ ಅತ್ಯಗತ್ಯವಾಗಿ ಆಗಲೇ ಬೇಕಾಗಿರುವುದರಿಂದ ಇದನ್ನು ಶೀಘ್ರದಲ್ಲೇ ಮಂಜೂರಾತಿ ಕೊಟ್ಟು ಮಾಡಿಕೊಡುತ್ತೀರಾ ?

ಶ್ರೀ ಎಂ.ಪಿ. ಪ್ರಕಾಶ್.—ಸರ್ಕಾರ ಈ ವರ್ಷವೇ ಅದಕ್ಕೆ ಮಂಜೂರಾತಿಯನ್ನು ಮಾಡಿಕೊಡ ಲಾಗುವುದು.

ವಿಷಯ :— ಸರಕಾರದಿಂದ ಸಹಾಯಧನ ಪಡೆಯುತ್ತಿರುವ ಖಾಸಗೀ ಶಿಕ್ಷಣ ಸಂಸ್ಥೆಗಳು ದುಬಾರಿ ಶುಲ್ಕವನ್ನು ವಸೂಲು ಮಾಡುತ್ತಿರುವುದು.

ಪ್ರ. 141(68) ಶ್ರೀ ಜಿ.ಎಸ್. ಬಸವರಾಜ್ (ಆನವೇರಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ರಾಜ್ಯದಲ್ಲಿ ಸರ್ಕಾರದ ಸಹಾಯಧನ ಪಡೆಯುತ್ತಿರುವ ಖಾಸಗೀ ಶಿಕ್ಷಣ ಸಂಸ್ಥೆಗಳು ಅಂದರೆ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ, ಕಾಲೇಜುಗಳು ಮತ್ತು ತಾಂತ್ರಿಕ ಕಾಲೇಜುಗಳು ದುಬಾರಿ ಶುಲ್ಕವನ್ನು ವಸೂಲು ಮಾಡುತ್ತಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ. ಈ ಸಂಸ್ಥೆಗಳು ವಸೂಲು ಮಾಡುವ ಶುಲ್ಕದ ಲೆಕ್ಕ ಪತ್ರಗಳನ್ನು ಸರ್ಕಾರದವರು ಪರಿಶೀಲಿ ಸುತ್ತಿದ್ದಾರೆಯೆ ;

ಇ. ದುಬಾರಿ ಶುಲ್ಕವನ್ನು ವಸೂಲು ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಕಟ್ಟಡಕ್ಕಾಗಿ ಹಣ ವಸೂಲು ಮಾಡುತ್ತಿದ್ದು ಕಟ್ಟಡ ಸಹಾ ಕಟ್ಟದೆ ಬಾಡಿಗೆ ಮನೆಗಳಲ್ಲಿ ಶಾಲೆಗಳನ್ನು ನಡೆಸು ತ್ತಿದ್ದು, ಕಟ್ಟಡದ ಹಣವನ್ನು ಸ್ವಂತಕ್ಕೆ ಬಳಸಿಕೊಳ್ಳುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಬಿ. ರಾಚಯ್ಯ (ವಿದ್ಯಾ ಮಂತ್ರಿಗಳು) :—

ಅ. –ಇಲ್ಲ–

ಆ. –ಹೌದು–

ಇ. –ಇಲ್ಲ–

ಶ್ರೀ ಜಿ. ಎಸ್. ಬಸವರಾಜು.—ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಯ(ಅ)ಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದಾರೆ, (ಆ) ಪ್ರಶ್ನೆಗೆ ಉತ್ತರವಾಗಿ ಹೌದು ಎಂದು ಹೇಳಿದ್ದಾರೆ ಮತ್ತು (ಇ) ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದಾರೆ ಸ್ವಾಮಿ ಇದರ ಅರ್ಥ ಏನು?

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು, ಆ ವಿಷಯಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ಅಂತ ಕೇಳಿದ್ದಾರೆ, ಆದುದರಿಂದ ಅದು ಇಲ್ಲ ಎಂದು ಉತ್ತರ ಕೊಟ್ಟಿದೆ.

ಶ್ರೀ ಜಿ. ಎಸ್. ಬಸವರಾಜು.—ಸ್ವಾಮಿ; ಬೆಂಗಳೂರಿನಲ್ಲಿ ಸುಮಾರು ಒಂದು ಸಾವಿರ ಶಿಕ್ಷಣ ಸಂಸ್ಥೆಗಳು ಇವೆ. ಒಬ್ಬೊಬ್ಬರು ಕೂಡ 5 ರಿಂದ 10 ಸಾವಿರದವರೆಗೆ ಶುಲ್ಕವನ್ನು ಕಲೆಕ್ಟ್ ಮಾಡು ತ್ತಾರೆ. ಉದಾಹರಣೆಗೆ ಬೆಂಗಳೂರಿನಲ್ಲಿರುವ ಆರಬಿಂದೋ ಶಿಕ್ಷಣ ಸಂಸ್ಥೆ, ಬಾಲ್ವಿನ್ ಶಿಕ್ಷಣ ಸಂಸ್ಥೆ ಮತ್ತು ಈಸ್ಟ್‌ವೆಸ್ಟ್ ಶಿಕ್ಷಣ ಸಂಸ್ಥೆ ಇವುಗಳು ಬಹಳ ದುಬಾರಿಯಾಗಿ ಶುಲ್ಕವನ್ನು ಕಲೆಕ್ಟ್ ಮಾಡುತ್ತಾರೆ. ಇದರ ಬಗ್ಗೆ ಸರ್ಕಾರ ಗಮನ ತೆಗೆದುಕೊಳ್ಳದೇ ಹೋದರೆ ಬಹಳ ಕಷ್ಟವಾಗುತ್ತದೆ. ಇದಕ್ಕೆ ಇಂಗ್ಲಿಷ್‌ನಲ್ಲಿ ಒಂದು ಗಾದೆ ಇದೆ. ಅದು ಏನೆಂದರೆ When Rome was burning nero was biddling ಎಂದು. ಈ ದುರ್ವ್ಯವಹಾರವನ್ನು ತಡೆಗಟ್ಟುವುದಕ್ಕೆ ಏನು ಕ್ರಮ ತೆಗೆದು ಕೊಂಡಿದ್ದೀರಾ? ಇನ್ನು ಮಾನ್ಯ ಮಂತ್ರಿಗಳು ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಒಂದು ಮಸೂದೆಯನ್ನು ಈ ಸಭೆಯಲ್ಲಿ ಇಟ್ಟಿದ್ದಾರೆ. ಅದರ ಬಗ್ಗೆ ಇನ್ನೂ ಉತ್ತರ ಬಂದಿಲ್ಲಾ. ಈ ರೀತಿಯಾಗಿ ಬೇಜವಾ ಬ್ದಾರಿಯಾದ ಉತ್ತರ ಕೊಟ್ಟರೆ ನಾವು ಮತ್ತೇನು ಕೇಳುವುದು.

ಶ್ರೀ ಬಿ. ರಾಚಯ್ಯ.—ನಾನೇನೂ ಬೇಜವಾಬ್ದಾರಿಯಾದ ಉತ್ತರ ಕೊಟ್ಟಿಲ್ಲಾ. ಮಾನ್ಯ ಸದಸ್ಯರು ಆ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಅಂತ ಕೇಳಿದ್ದಾರೆ ಅದಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದೆ. ಎರಡನೆಯದಾಗಿ ಈಗಾಗಲೇ ಕ್ಯಾಪಿಟೇಷನ್ ಶುಲ್ಕವನ್ನು ತೆಗೆಯುವ ಬಗ್ಗೆ ಮಸೂದೆಯನ್ನು ಸಭೆಯ ಮುಂದೆ ಇಟ್ಟಿದೆ. ಅದರ ಬಗ್ಗೆ ಚರ್ಚೆ ಬಂದಾಗ ಮಾನ್ಯ ಸದಸ್ಯರು ಈ ವಿಚಾ ರದಲ್ಲಿ ಏನು ಸಲಹೆಗಳನ್ನು ಕೊಡಬೇಕೋ ಕೊಡಲಿ. ಮತ್ತೆ ಈಗ ಏಡೆಡ್ ಸ್ಕೂಲುಗಳು ಸರ್ಕಾರ ನಿಗದಿ ಮಾಡಿರುವ ಪ್ರಕಾರ ವಸೂಲ್ಮಾಡುತ್ತಿದ್ದಾರೆ ಆದುದರಿಂದ (ಇ) ಪ್ರಶ್ನೆಗೆ ಉತ್ತರವಾಗಿ ಇಲ್ಲ ಅಂತ ಹೇಳಿದೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದುದು ಅನ್ ಏಡೆಡ್ ಸ್ಕೂಲುಗಳ ವಿಚಾರ ಏಡೆಡ್